ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 455 ಎಲ್ಇಟಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 31.12.2018

**ಇವರಿಂದ:**
ಸರ್ಕಾರದ ಕಾರ್ಯದರ್ಶಿಗಳು,
ಕಾರ್ಮಿಕ ಇಲಾಖೆ,
ವಿಕಾಸಸೌಧ, ಬೆಂಗಳೂರು.

**ಇವರಿಗೆ:**
ಜಂಟಿ ಕಾರ್ಯದರ್ಶಿಗಳು ಹಾಗೂ
ಜಂಟಿ ಕಾರ್ಮಿಕ ಆಯುಕ್ತರು,
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ
ಸಾಮಾಜಿಕ ಭದ್ರತಾ ಮಂಡಳಿ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು

ದಿನಾಂಕ: 03/01/19
ಸಂಖ್ಯೆ: 11319

ಮಾನ್ಯರೆ,

ವಿಷಯ: 2018-19ನೇ ಸಾಲಿನ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯ ಕ್ರಿಯಾ ಯೋಜನೆ ಕುರಿತು..

ಉಲ್ಲೇಖ: 1) ಸರ್ಕಾರದ ಆದೇಶದ ಸಂ: ಕಾಇ 65 ಎಲ್ಇಟಿ 2018 ಭಾಗ-3, ದಿ: 14/09/2018
2) ತಮ್ಮ ಪತ್ರ ಸಂಖ್ಯೆ: ಅಸಂಕಾ/ ಅ.ಪ.ಯೋ/ ಸಿ.ಆರ್-02/ 2017-18, ದಿನಾಂಕ: 10/12/2018

31-12-2018

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸಚಿವ ಸಂಪುಟವು ಕ್ರಿಯಾ ಯೋಜನೆಯನ್ನು ಅನುಮೋದಿಸಿರುವಂತೆ, ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ ಈಗಾಗಲೇ ಜಾರಿಯಲ್ಲಿರುವ ಅಪಘಾತ ಪರಿಹಾರ ಸೌಲಭ್ಯದೊಂದಿಗೆ ವಿಶೇಷ ತರಬೇತಿ ಹಾಗೂ ಜೀವ ರಕ್ಷಕ ಮತ್ತು ಅಪಘಾತ ತಡೆ-ಸುರಕ್ಷಾ ಚಾಲನಾ ತರಬೇತಿ (ಅಪಘಾತ ಜೀವ ರಕ್ಷಕ) ಕಾರ್ಯಕ್ರಮವನ್ನು ಮುಂದುವರೆಸುತ್ತಾ, **2018-19ನೇ** ಸಾಲಿಗೆ ಇದೇ ಯೋಜನೆಯ **"ಲೆಕ್ಕಶೀರ್ಷಿಕೆ 2230-01-103-703"** ರಡಿ ನಿಗದಿಪಡಿಸಿರುವ **ರೂ.1750.00 ಲಕ್ಷ**ಗಳ ಅನುದಾನದಲ್ಲಿ ಬಳಸಿಕೊಳ್ಳಲು ಉಲ್ಲೇಖ-1ರಲ್ಲಿ ಸರ್ಕಾರವು ಆದೇಶ ಹೊರಡಿಸಿರುತ್ತದೆ.

..2..

ಅದರಂತೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಕಾಣಿಸಿರುವಂತೆ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಜರೂರಾಗಿ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಈ ಯೋಜನೆಗೆ ಅವಶ್ಯವಾಗಿರುವ ಅನುದಾನವನ್ನು ಸಹಾಯಕ ಕಾರ್ಮಿಕ ಆಯುಕ್ತರು, ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಬಿಡುಗಡೆಗೊಳಿಸಿ, ಸದರಿ ಅನುದಾನವನ್ನು ಖರ್ಚುಮಾಡಲು ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಲು ಕ್ರಮ ವಹಿಸುವುದು. ನಂತರ, ಕ್ರಮ ಕೈಗೊಂಡಿರುವ ಬಗ್ಗೆ ಹಾಗೂ ಪರಿವೀಕ್ಷಣೆ ಕೈಗೊಂಡಿರುವ ವರದಿಗಳನ್ನು, ಹಣ ಬಳಕೆ ಪ್ರಮಾಣ ಪತ್ರದೊಂದಿಗೆ ವಿವರವಾದ ಕ್ರಿಯಾ ಯೋಜನೆಯನ್ನು **ಮುಂದಿನ ಮಂಡಳಿಯ ಸಭೆಯ ಮುಂದೆ ಘಟನೋತ್ತರ ಅನುಮೋದನೆಗಾಗಿ** ಮಂಡಿಸುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಜಿ.ಎಂ.ಸಿದ್ದರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

# ಅನುಬಂಧ

2018–19ನೇ ಸಾಲಿಗೆ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯ **"ಲೆಕ್ಕಶೀರ್ಷಿಕೆ 2230–01–103–7–03"** ರಡಿ ನಿಗದಿಪಡಿಸಲಾದ ಆಯವ್ಯಯ **ರೂ. 1750.00** ಲಕ್ಷಗಳ ಅನುದಾನದಲ್ಲಿ ಈ ಕೆಳಕಂಡ ಕ್ರಿಯಾ ಯೋಜನೆಗೆ ಬಳಸಿಕೊಳ್ಳುವುದು.

| ಕ್ರ.ಸಂ | ಉದ್ದೇಶ | ಒಟ್ಟು ಮೊತ್ತ | ಒಟ್ಟು ಮೊತ್ತದ ವಿಂಗಡಣೆ | ಅಂದಾಜು ಫಲಾನುಭವಿಗಳ ಸಂಖ್ಯೆ | ದರ | ಒಟ್ಟು ಮೊತ್ತ |
|---|---|---|---|---|---|---|
| 1. | ಮಂಡಳಿಯಿಂದ ನೇರವಾಗಿ ಅಪಘಾತ ಪರಿಹಾರ ಯೋಜನೆ. (ಡಿಸೆಂಬರ್–2018ರಿಂದ ಮಾರ್ಚ್–2019ರವರೆಗೆ) ಮರಣ ಪ್ರಕರಣಗಳಲ್ಲಿ – ರೂ.5 ಲಕ್ಷ, ಶಾಶ್ವತ ದುರ್ಬಲತೆ – ರೂ.2 ಲಕ್ಷ, ತಾತ್ಕಾಲಿಕ ದುರ್ಬಲತೆ ಮತ್ತು ಆಸ್ಪತ್ರೆ ವೆಚ್ಚ – ರೂ.1 ಲಕ್ಷದವರೆಗೆ | 750 | ಮರಣ ಪ್ರಕರಣದಲ್ಲಿ ನೀಡಬಹುದಾದ ಪರಿಹಾರ | 75 | 5 | 375 |
| | | | ಶಾಶ್ವತ ದುರ್ಬಲತೆ | 50 | 2 | 100 |
| | | | ತಾತ್ಕಾಲಿಕ ದುರ್ಬಲತೆ ಮತ್ತು ಆಸ್ಪತ್ರೆ ವೆಚ್ಚ | 50 | 1 | 50 |
| | | | ಕ.ರಾ.ರ.ಸಾ.ಸಂಸ್ಥೆಯಿಂದ ಕ್ಲೀನರ್‌ಗಳಿಗೆ ತರಬೇತಿ ಹಾಗೂ ಪ್ರಮಾಣಪತ್ರ | 4500 | 0.05 | 225 |
| 2. | ಅಪಘಾತ ಜೀವರಕ್ಷಕ ಯೋಜನೆ | 290 | ಅಪಘಾತ ಜೀವರಕ್ಷಕ ತರಬೇತಿ | 25000 | 0.0036 | 90 |
| | | | ಪ್ರಥಮ ಚಿಕಿತ್ಸಾ ಕಿಟ್ | 25000 | 0.008 | 200 |
| 3. | ಖಾಸಗಿ ವಾಣಿಜ್ಯ ವಾಹನ ಚಾಲಕರನ್ನು ಗುರುತಿಸುವಿಕೆ ನೋಂದಣಿ ಮತ್ತು ಸ್ಮಾರ್ಟ್ ಕಾರ್ಡ್ ವಿತರಣೆ | 525 | ಖಾಸಗಿ ವಾಣಿಜ್ಯ ವಾಹನ ಚಾಲಕರನ್ನು ಗುರುತಿಸುವಿಕೆ ನೋಂದಣಿ ಮತ್ತು ಸ್ಮಾರ್ಟ್ ಕಾರ್ಡ್ ವಿತರಣೆ | 500000 | 0.00075 | 375 |
| | | | ಖಾಸಗಿ ವಾಣಿಜ್ಯ ವಾಹನ ಕ್ಲೀನರ್‌ಗಳನ್ನು ಗುರುತಿಸುವಿಕೆ ನೋಂದಣಿ ಮತ್ತು ಸ್ಮಾರ್ಟ್ ಕಾರ್ಡ್ ವಿತರಣೆ | 100000 | 0.00075 | 75 |
| | | | IT Application, Web Application & Android Application for Drivers & Cleaners with Real Time Monitoring & Grievance Redressal for 1 year | 1 | 50 | 50 |
| | | | Social Audit & Data Verification Through Independent Agency | 1 | 25 | 25 |
| 4. | ಅಪಘಾತದಲ್ಲಿ ನಿಧನ ಹೊಂದಿದ ಅಥವಾ ಸಂಪೂರ್ಣ ದುರ್ಬಲತೆ ಹೊಂದಿದ ಚಾಲಕರ ಗರಿಷ್ಠ ಇಬ್ಬರು ಮಕ್ಕಳಿಗೆ 1ನೇ ತರಗತಿ ಯಿಂದ ಪದವಿ ಪೂರ್ವ/12ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಾರ್ಷಿಕ ಶೈಕ್ಷಣಿಕ ಧನ ಸಹಾಯ | 48 | ಅಪಘಾತದಲ್ಲಿ ನಿಧನ ಹೊಂದಿದ ಅಥವಾ ಸಂಪೂರ್ಣ ದುರ್ಬಲತೆ ಹೊಂದಿದ ಚಾಲಕರ, ನಿರ್ವಾಹಕರ ಹಾಗೂ ಕ್ಲೀನರ್‌ಗಳ ಗರಿಷ್ಠ ಇಬ್ಬರು ಮಕ್ಕಳಿಗೆ 1ನೇ ತರಗತಿ ಯಿಂದ ಪದವಿ ಪೂರ್ವ/12ನೇ ತರಗತಿಯವರೆಗೆ ವಾರ್ಷಿಕ ರೂ. 10,000/–ರಂತೆ ಶೈಕ್ಷಣಿಕ ಧನ ಸಹಾಯ | 240 | 0.2 | 48 |

| | | | | | | |
|---|---|---|---|---|---|---|
| 5. | ಚಾಲಕರಿಗೆ ಶ್ರಮ ಸಮ್ಮಾನ ಹಾಗೂ ವಿಶೇಷ ಪುರಸ್ಕಾರ ಪ್ರಶಸ್ತಿ | 38.28 | ಪ್ರತಿ ಜಿಲ್ಲೆಯಲ್ಲಿ ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ 4 ಚಕ್ರಗಳ ವಾಹನ ಚಾಲಕರಿಗೆ ತಲಾ ರೂ.10,000/-ರಂತೆ ಶ್ರಮ ಸಮ್ಮಾನ ಪ್ರಶಸ್ತಿ | 30 | 0.1 | 3 |
| | | | ಪ್ರತಿ ಜಿಲ್ಲೆಯಲ್ಲಿ ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ ತ್ರಿಚಕ್ರ ವಾಹನ ಚಾಲಕರಿಗೆ ತಲಾ ರೂ.10,000/-ರಂತೆ ಶ್ರಮ ಸಮ್ಮಾನ ಪ್ರಶಸ್ತಿ | 30 | 0.1 | 3 |
| | | | ಪ್ರತಿ ಜಿಲ್ಲೆಯಲ್ಲಿ ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ 04 ಚಕ್ರ ವಾಹನಗಳ 05 ವಾಹನ ಚಾಲಕರಿಗೆ ತಲಾ ರೂ.1000/-ರಂತೆ ವಿಶೇಷ ಪುರಸ್ಕಾರ | 150 | 0.01 | 1.5 |
| | | | ಪ್ರತಿ ಜಿಲ್ಲೆಯಲ್ಲಿ ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ ತ್ರಿಚಕ್ರ ವಾಹನಗಳ 05 ವಾಹನ ಚಾಲಕರಿಗೆ ತಲಾ ರೂ.1000/-ರಂತೆ ವಿಶೇಷ ಪುರಸ್ಕಾರ | 150 | 0.01 | 1.5 |
| | | | 62 ಚಾಲಕರಿಗೆ (ತಲಾ 31 ರಂತೆ 04 ಚಕ್ರಗಳ ಹಾಗೂ ತ್ರಿಚಕ್ರಗಳ ವಾಹನ) ರೂ.1050/-ಗಳಲ್ಲಿ ಸ್ಮರಣಿಕೆ ಹಾಗೂ ಪ್ರಮಾಣ ಪತ್ರ | 1860 | 0.0105 | 19.53 |
| | | | ಕಾರ್ಮಿಕ ಬಂಧು ಕಮೀಷನ್ (ಪ್ರತಿ ಪ್ರಶಸ್ತಿಗೆ ರೂ.200/-ರಂತೆ) | 1860 | 0.002 | 3.72 |
| | | | ಪ್ರಶಸ್ತಿ ಪ್ರಧಾನ ಸಮಾರಂಭದ ಖರ್ಚು-ವೆಚ್ಚ : ಪ್ರತಿ ಜಿಲ್ಲೆಗೆ ರೂ.20,000/-ರಂತೆ | 30 | 0.2 | 6 |
| 6. | ಕ.ರಾ.ಅ.ಕಾ.ಸಾ.ಭ. ಮಂಡಳಿಯಿಂದ ಯೋಜನೆಗಳ ಜಾರಿಗಾಗಿ ಆಡಳಿತಾತ್ಮಕ ಹಾಗೂ ಕಾರ್ಯಾಚರಣೆ ವೆಚ್ಚಗಳು | 98.72 | ಯೋಜನೆಗಾಗಿ IT ಸಲಹೆಗಾರರು | 1 | 3.6 | 3.6 |
| | | | ಯೋಜನೆಗಾಗಿ IT ಸಹಾಯಕರು | 2 | 2.4 | 4.8 |
| | | | ಹೊರಗುತ್ತಿಗೆ ಆಧಾರದಲ್ಲಿ ವಾಹನ | 2 | 3.6 | 7.2 |
| | | | ಜಾಹೀರಾತು, ಮುದ್ರಣ ಮತ್ತು ಸಂವಹನ ವೆಚ್ಚ | 1 | 15 | 15 |
| | | | ಕಚೇರಿ ವೆಚ್ಚ ಮತ್ತು ಉಪಕರಣ | 1 | 10 | 10 |
| | | | ದೂರವಾಣಿ ಹಾಗೂ ಇಂಟರ್‌ನೆಟ್ ವೆಚ್ಚ | 1 | 1.23 | 1.23 |
| | | | ಅಂಚೆ ವೆಚ್ಚ | 1 | 0.75 | 0.75 |
| | | | ಪ್ರವಾಸ ವೆಚ್ಚ | 1 | 1.5 | 1.5 |
| | | | ಹೊರಗುತ್ತಿಗೆ ಆಧಾರದಲ್ಲಿ ಲೆಕ್ಕಪತ್ರ ಸಲಹೆಗಾರರು | 1 | 6 | 6 |
| | | | ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಛೇರಿ ವೆಚ್ಚ | 41 | 0.12 | 4.92 |

| | | | | | | |
|---|---|---|---|---|---|---|
| | | | ಕ್ಲೇಮ್‌ಗಳ ವೈದ್ಯಕೀಯ ಪರಿಶೀಲನೆ (ಮರಣ ಪ್ರಕರಣಗಳಲ್ಲಿ ರೂ.2,000, ಶಾಶ್ವತ ದುರ್ಬಲತೆ ರೂ.2,500 ಹಾಗೂ ಆಸ್ಪತ್ರೆ ವೆಚ್ಚ ಮರುಪಾವತಿ ರೂ.3,000 ದಂತೆ) | 75 | 0.02 | 1.5 |
| | | | | 50 | 0.025 | 1.25 |
| | | | | 50 | 0.03 | 1.5 |
| | | | ಕಾರ್ಮಿಕ ಬಂಧುಗಳಿಗೆ ಕಮಿಷನ್ (ಮರಣ ಪ್ರಕರಣಗಳಲ್ಲಿ ರೂ.5,000, ಶಾಶ್ವತ ದುರ್ಬಲತೆ ರೂ.2,000 ಹಾಗೂ ಆಸ್ಪತ್ರೆ ವೆಚ್ಚ ಮರುಪಾವತಿ ರೂ.1,000 ದಂತೆ ಹಾಗೂ ಶೈಕ್ಷಣಿಕ ಧನಸಹಾಯ ಪ್ರಕರಣ ರೂ.500 ರಂತೆ) | 75 | 0.05 | 3.75 |
| | | | | 50 | 0.02 | 1 |
| | | | | 50 | 0.01 | 0.5 |
| | | | | 125 | 0.005 | 0.625 |
| | | | ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಯೋಜನೆಯ ಡಾಟಾ ಎಂಟ್ರಿ ಆಪರೇಟರ್ & ಕ್ಲೇಮ್ ವಿಚಾರಣಾ ಎಕ್ಸಿಕ್ಯೂಟಿವ್ | 11 | 2.4 | 26.4 |
| | | | ಹೊರಗುತ್ತಿಗೆ ಆಧಾರದಲ್ಲಿ ಯೋಜನಾ ವ್ಯವಸ್ಥಾಪಕರು (ರಾಜ್ಯ ಸಾರಿಗೆ ಇಲಾಖೆಯಲ್ಲಿ ನಿವೃತ್ತ ಅಧಿಕಾರಿಗೆ ಆದ್ಯತೆ | 1 | 7.2 | 7.2 |
| | | **1750** | | | | **1749.975** |

(ಜಿ.ಎಂ.ಸಿದ್ದರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.